C.C. No.- 6700/2025
CW-6/ PW-3

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
(ಸಂಚಾರಿ ನ್ಯಾಯಾಲಯ) ಕಾರಟಗಿ.
ಸಾಕ್ಷಿಯನ್ನು ದಿನಾಂಕ- **23.02.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಹೆಚ್.ಬಿ.ಎ ವಕೀಲರಿಂದಃ

1. ನಾನು ಒಕ್ಕಲುತನ ಮಾಡುತ್ತಿರುತ್ತೇನೆ. ವ್ಯವಸಾಯದ ಕೆಲಸಕ್ಕೆ ಕಾಲುವೆಯ ನೀರನ್ನು ಬಳಸುತ್ತೇವೆ. ಆಗಸ್ಟ ತಿಂಗಳಲ್ಲಿ ಕಾಲುವೆ ನೀರು ಬಿಡುವ ಕಾರಣ ಆ ಸಮಯದಲ್ಲಿ ವ್ಯವಸಾಯದ ಕೆಲಸ ಹೆಚ್ಚಾಗಿರುತ್ತದೆ ಎಂದರೆ ಸರಿ. ಚಾಸಾ-1 ಮತ್ತು 8 ನಮ್ಮ ಮನೆಯ ಪಕ್ಕದವರು. ಈ ದಿನ ನಾನು ಅವರೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ನಿಪಿ-2 ನ್ನು ನಾನು ಹೇಳಿ ಬರೆಸಿರುವುದಿಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ನಿಪಿ-2 ಕ್ಕೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಪ್ರಕರಣದ ಸಂಬಂಧ 3 ಬಾರಿ ಠಾಣೆಗೆ ಹೋಗಿರುತ್ತೇನೆ. ಆದರೆ ನಿಖರವಾಗಿ ಯಾವ ದಿನವೆಂದು ಹೇಳಲು ಆಗುವುದಿಲ್ಲ. 2-3 ವರ್ಷಗಳ ಕೆಳಗೆ ಹೋಗಿರುತ್ತೇನೆ. ನಂತರ ಹೋಗಿರುವುದಿಲ್ಲ. ನಿಪಿ-4 ನ್ನು ಯಾರು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಪೋಲಿಸರು ಕಳುವಾದ ಬಗ್ಗೆ ತೆಗೆದಿರುತ್ತಾರೆ ಅದರೆ ಯಾವ ಪೋಲಿಸರು ತೆಗೆದಿರುತ್ತಾರೆ ಎಂದು ನಿಖರವಾಗಿ ಗೊತ್ತಿಲ್ಲ. ಅದನ್ನು ಫೋನಿನ ಮುಖಾಂತರ ತೆಗೆದಿರುತ್ತಾರೆ. ನಿಪಿ-2 ನ್ನು ಪೋಲಿಸರ ಹೇಳಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಆರೋಪಿಯನ್ನು ಇದೇ ಮೊದಲಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿಯು 2-3 ಬಾರಿ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆದರೆ ಯಾವ ದಿನಾಂಕ ಎಂದು ನನಗೆ ನಿಖರವಾಗಿ ನೆನಪಿಲ್ಲ. ಸಾಕ್ಷಿಯು ಮುಂದುವರೆದು 06-12-2023 ರಂದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-6 ಕ್ಕೆ ಪೋಲಿಸರ ಹೇಳಿಕೆಯ ಮೇರೆಗೆ ನೀತಿರುತ್ತೀರಿ ಎಂದರೆ ಸಾಕ್ಷಿಯು ಕಳ್ಳನನ್ನು ಹಿಡಿದುಕೊಂಡು ಬಂದಾಗ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮಗೆ ಯಾವುದೇ ವಸ್ತುಗಳನ್ನು ತೋರಿಸಿಲ್ಲ ಎಂದರೆ ಸರಿ. ಠಾಣೆಗೆ ಹೋಗಲು ಪೋಲಿಸರು ನೋಟಿಸ್ ನೀಡಿರುವುದಿಲ್ಲ. ದಿನಾಂಕಃ 16-11-2023 ರಂದು ದೀಪಾವಳಿ ಇತ್ತು ಎಂದರೆ ಸರಿ. ಆ

ದಿನ ಚಾಸಾ-1 ರವರ ಸುತ್ತಮುತ್ತ ಇರುವ ಅಂಗಡಿಗಳಲ್ಲಿ ದೀಪಾವಳಿಯನ್ನು ಜೋರಾಗಿ ಆಚರಣೆ ಮಾಡುತ್ತಾರೆ ಎಂದರೆ ಸರಿ. ಆದಕಾರಣ ಅಲ್ಲಿ ಜನ ಓಡಾಡುತ್ತಾರೆ ಎಂದರೆ ಸರಿ. ನಿಪಿ-2 ನ್ನು ಮಾಡುವ ಕಾಲಕ್ಕೆ ನನ್ನ ಅಂಗ ಜಪ್ತಿ ಮತ್ತು ತನಿಖಾಧಿಕಾರಿ ಅಂಗ ಜಪ್ತಿ ಮಾಡಿರುವುದಿಲ್ಲ. ಚಾಸಾ-1 ರವರು ನನಗೆ ಪರಿಚಯವಿರುವ ಕಾರಣ ಅವರ ಮನೆಯಲ್ಲಿ ಯಾವುದೇ ಕಳ್ಳತನ ಆಗದೇ ಇದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮನೆಯ ಸುತ್ತಮುತ್ತ ಇರುವ ಅಂಗಡಿಗಳು ಮತ್ತು ಅವರ ಮಾಲೀಕರ ಹೆಸರು ನನಗೆ ಗೊತ್ತು. ನಾನು ಠಾಣೆಯ ಖಾಯಂ ಪಂಚ ಎಂದರೆ ಸರಿಯಲ್ಲ. ಠಾಣೆಗೆ ಹೋದಾಗ ಎಷ್ಟು ದಾಖಲೆಗಳ ಮೇಲೆ ಸಹಿ ಪಡೆದಿದ್ದರು ಎಂದರೆ ಸಾಕ್ಷಿಯು 3 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅವುಗಳನ್ನು ಯಾವ ಕಾರಣಕ್ಕೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಕಳುವಾದ ಬಗ್ಗೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಠಾಣೆಯ ಎಸ್.ಹೆಚ್.ಓ ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. 1 ರಿಂದ 3 ಮುದ್ದೇಮಾಲುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಎಮ್.ಓ.-4 ರ ಮೇಲೆ ನಿಮ್ಮ ಸಹಿ, ದಿನಾಂಕ ನಮೂದು ಇಲ್ಲ ಎಂದರೆ ಸರಿಯಲ್ಲ. ಎಮ್.ಓ.-4 ರಲ್ಲಿ ಇರುವ ದುಡ್ಡನ್ನು ಎಷ್ಟು ಕಟ್ಟುಗಳಲ್ಲಿ ಇಟ್ಟಿದ್ದರು ಎಂದು ನನಗೆ ನೆನಪಿಲ್ಲ. ಈ ದಿನ ನ್ಯಾಯಾಲಯಕ್ಕೆ ಚಾಸಾ-1 ರವರೊಂದಿಗೆ ಬಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ, ಮುದ್ದೇಮಾಲುಗಳಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದೀಪಾವಳಿ ಇದ್ದ ಕಾರಣ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಲು ಸಾಧ್ಯವಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)